ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.**462/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಮಂಜುನಾಥ ಗುಡಸಲಮನಿ | ಪ್ರಾಸಾ -2 |
| ತಂದೆಯ ಹೆಸರು | : ನಿಂಗಪ್ಪ | ಚಾಸಾ-1 |
| ವಯಸ್ಸು | : 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಬಸ್ ಚಾಲಕ, KSRTC | ದಿನಾಂಕಃ24.01.2025. |
| ವಾಸಸ್ಥಳ | : ಉಡುಪಿ | |

:ಮುಖ್ಯ ವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದ:

ನಾನು ಉಡುಪಿ KSRTC ಡಿಪೋನಲ್ಲಿ 12 ವರ್ಷಗಳಿಂದ ಬಸ್ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-2 ರವರು ಸಹಾ ನಮ್ಮ ಇಲಾಖೆಯ ಚಾಲಕರು. ಚಾಸಾ-3 ರಿಂದ 5 ರವರ ಪರಿಚಯ ನನಗಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಚಾರ್ಮುಡಿ ಘಾಟಿಯಲ್ಲಿ ನಮ್ಮ್ ಬಸ್ಸಿಗೆ ಅಡ್ಡ ಗಟ್ಟಿದ ವಿಚಾರವಾಗಿ ನಾನು ನೋಡಿದ್ದೇನೆ.

ದಿ.02.11.2023 ರಂದು ನಾನು ಉಡುಪಿಯಿಂದ ಚಿಕ್ಕಮಗಳೂರಿಗೆ KSRTC ಬಸ್ ಸಂ.KA-19-F-3360 ಬಸ್ಸನ್ನು ಬೆ.10.55 ರ ಸಮಯಕ್ಕೆ ಚಾರ್ಮುಡಿ ಘಟಿಯ ವೀವ್ ಪಾಯಿಂಟ್ ಬಳಿ ಚಲಾಯಿಸಿಕೊಂಡು ಬರುತ್ತಿರುವಾಗ ಆರೋಪಿಯು KA-18-1856 ಡಿಯೋ ವಾಹನದಲ್ಲಿ ಹಿಂದೆ ಇಂದ ಬಂದು ಬಸ್ಸನು್ನ ಅಡ್ಡ ಹಾಕಿ ನಿಲ್ಲಿಸಿ ನನ್ನನ್ನು ಶರ್ಟ್ ಹಿಡಿದು ಎಳೆದು ತನ್ನ ಕೈಯಿಂದ ನನ್ನ ಎಡಕೆನ್ನೆಗೆ ಹೊಡೆದು ತನ್ನ ಹೆಲ್ಮೆಟ್ ನಿಂದ ಹಣೆ ಮತ್ತು ಮೂಗಿಗೆ ಹೊಡೆದರು. ಅಲ್ಲಿಂದ ನಾವು ಕೊಟ್ಟಿಗೆಹಾರಕ್ಕೆ ಬಂದು ಬಸ್ಸುನಲ್ಲಿ ಇದ್ದ ಪ್ರಯಾಣಕರನ್ನು ಬೇರೆ ಬಸ್ಸಿಗೆ ಕಳಿಸಿ ನಾನು ಮತ್ತು ಚಾಸಾ-2 ರವರು ಬಣಕಲ್ ಪೋಲಿಸ್ ಠಾಣೆಗೆ ಬೆ.11.25 ರ ಸಮಯಕ್ಕೆ ಹೋಗಿ ದೂರು ದಾಖಲಿಸಿದೆವು. ಆ ದಿನ ಸಂಜೆ ಸುಮಾರು 4.30 ರ ಸುವಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ನಾನು ಮತ್ತು ಚಾಸಾ-2 ರವರು ಸ್ಥಳ ತೋರಿಸಿದಂತೆ ಇಬ್ಬರು ಸಾಕ್ಷಿದಾರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಂತರ ದಿ.10.11.2023 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಘಟನಾ ಸಮಯಕ್ಕೆ ನಾನು ಧರಿಸಿದ್ದ ಶರ್ಟ್ ನ್ನು ವಶಕ್ಕೆಪಡೆದು ಪೋಟೋ ತೆಗೆದಿದ್ದಾರೆ. ಆ ಸಮಯಕ್ಕೆ ಇಬ್ಬರು ವ್ಯಕ್ತಿಗಳು ಸಾಕ್ಷಿದಾರರು ಇದ್ದು ಸಮಯ ಸುಮಾರು ಮ.3.30 ರಿಂದ 4.00 ಗಂಟೆಯಾಗಿತ್ತು.

ಸಾಕ್ಷಿಯು ದಿ.02.11.2023 ರ ದೂರು, ಪ್ರ.ವ.ವರದಿ, ಸ್ಥಳ ಮಹಜರ್, ಸ್ಥಳ ಮಹಜರ್ ಗೆ ಅಡಕಗೊಂಡ ಒಂದು ಪೋಟೊ ಅಮಾನತ್ತು ಮಹಜರ್, ಸದರಿ ಮಹಜರ್ ಗೆ ಅಡಕಗೊಂಡ ಪೋಟೊವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ಕ್ರಮವಾಗಿ ನಿಪಿ-1 ರಿಂದ 8 ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಟೀ ಶರ್ಟ್ ನ್ನು ನೋಡಿ ಅದನ್ನೆ ಕೃತ್ಯ ನಡೆದ ಸಮಯಕ್ಕೆ ಧರಿಸಿದ್ದು ನ್ಯಾಯಾಲಯದ ಮುಂದೆ ಇರುವ ಹೆಲ್ಮೆಟ್

ನಿಂದಲೇ ಆರೋಪಿ ತಮಗೆ ಹೊಡದಿದ್ದು ಎಂದು ಗುರುತಿಸುತ್ತಾರೆ. ಶರ್ಟ್ ನ್ನು ಎಂ.ಒ.1, ಹೆಲ್ಮೇಟ್ ನ್ನು ಎಂ.ಒ.2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>

ಆರೋಪಿ ಬಸ್ಸನ್ನು ಅಡ್ಡಗಟ್ಟಿದ ನಂತರ ಬಸ್ ನ್ನು ಚಲಾಯಿಸುತ್ತಿದ್ದ ಚಾಸಾ-2 ರವರಿಗೆ ಅ ವಾಚ್ಯ ಶಬ್ದಗಳಿಂದ ಬೈದಿದ್ದು ನಾನು ಕಳಗೆ ಇಳಿದ ನಂತರ ನನಗೂ ಸಹಾ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದರೆ ಸರಿ. ಆರೋಪಿ ಚಲಾಯಿಸುತ್ತಿದ್ದ ವಾಹನದ ಸಂ.KA-18-EK-1536 ಎಂದರೆ ಸರಿ. ಸ್ಥಳ ಮಹಜರ್ ಕಾಲಕ್ಕೆ ಚಾಸಾ-6 ಮತ್ತು 7 ರವರು ಸಾಕ್ಷಿದಾರರಾಗಿ ಹಾಜರಿದ್ದರು ಎಂದರೆ ಸರಿ. ಸ್ಥಳ ಮಹಜರ್ ಬರೆಯುವಾಗ ಸ.5.30 ಅಗಿತ್ತು ಎಂದರೆ ಸರಿ. ನಾನು ಶರ್ಟ್ ನ್ನು ಹಾಜರುಪಡಿಸುವಾಗ ಬೆ.10.45 ರಿಂದ 11.00 ಗಂಟೆಯಾಗಿತ್ತು ಎಂದರೆ ಸರಿ. ಅ ಸಮಯಕ್ಕೆ ಚಾಸಾ-6 ಮತುತ 8 ರವರು ಸಾಕ್ಷಿದಾರರಾಗಿ ಹಾಜರಿದ್ದರು ಎಂದರೆ ಸರಿ. ಎಂ.ಒ.1 ರ ಮೇಲೆ ಎರಡು ಗುಂಡಿಗಳು ಕಿತ್ತಿದ್ದು ಎಡತೋಳಿನ ಪಟ್ಟಿ ಕಿತ್ತುಹೋಗಿತ್ತು ಎಂದರೆ ಸರಿ. ಆ ಶರ್ಟ್ ನ್ನು ಮಹಜರ್ ಬರೆದು ವಶಕ್ಕೆ ಪಡೆದಿದ್ದಾರೆ ಎಂದರೆ ಸರಿ. ಕೃತ್ಯ ನಡೆದು 2 ವರ್ಷಗಳಾದ ಕಾರಣ ಈ ವಿಚಾರ ನನಗೆ ಮರೆತು ಹೋಗಿತ್ತು ಎಂದರೆ ಸರಿ.

<u>ಪಾಟೀ ಸವಾಲು: ನ್ಯಾಯಾಲಯದ ಸಮಯಾವಧಿ ಮುಗಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಮೂಡಿಗೆರೆ.